ದಿನಾಂಕಃ 16.02.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ವಾದಿ ಪರ ಶ್ರೀ. ಎಮ್. ಆರ್ . ಬಿ ವಕೀಲರಿಂದಃ**

ಸಿ ಟಿ ಎಸ್ 3226 ನೇದ್ದು ಮುಂಚೆ ಲಾಡ್ಜ ಕಟ್ಟಡ ಇದ್ದು , ಅದನ್ನು ಮಾಸ್ಟರ್ ಪ್ಲಾನ್ ನಲ್ಲಿ ಕೆಡವಿ ನಂತರ ನಾನು ಕಟ್ಟಡ ಕಟ್ಟಿಸಿದ್ದು, ಅದರಲ್ಲಿ ಬಟ್ಟೆ ಅಂಗಡಿಯನ್ನು ನಡೆಸುತ್ತಿದ್ದೇನೆ. ವಿವಾದಿತ ಮೃತ್ಯುಪತ್ರ ಆಗುವಾಗ ಸದರಿ ಆಸ್ತಿಯಲ್ಲಿ ಲಾಡ್ಜ ಇತ್ತು. ಸದರಿ ಕಟ್ಟಡ ಮಾಸ್ಟರ ಪ್ಲಾನ್ ನಲ್ಲಿ ಕೆಡವಿ ನಂತರ ಹೊಸ ಕಟ್ಟಡ ಮಾಡಿದ್ದು, ಅದರಲ್ಲಿ ನಾನು ಬಟ್ಟೆ ಅಂಗಡಿಯನ್ನು ನಡೆಸುತ್ತಿದ್ದ ಸಂಗತಿಯನ್ನು ನನ್ನ ಕೈಪೀಯತ್ತನಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಹೇಳಿರುತ್ತೇನೆ. ಸದರಿ ಆಸ್ತಿಯ ಪೈಕಿ ಅರ್ಧ ಹಿಸ್ಸೆ ಭಕ್ಷಿಸ ಪತ್ರವಾಗಿದ್ದು, ಉಳಿದ ಅಧ ಹಿಸ್ಸೆ ಮೃತ್ಯುಪತ್ರವಾಗಿರುತ್ತದೆ. ಪ್ರಸ್ತುತ ಸದರಿ ಆಸ್ತಿಗೆ ಸಂಬಂಧಿಸಿದಂತೆ ಒಂದೇ ಉತಾರ ಇರುತ್ತದೆ. ಈಗ ನೋಡುತ್ತಿರುವ ನಿಪಿ.12 ಸದರಿ ಆಸ್ತಿಯ ಉತಾರೆ ಇರುತ್ತದೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಹಳೆ ಉತಾರೆ ಇರುತ್ತದೆಂದು ನುಡಿಯುತ್ತಾರೆ. ಸದರಿ ನಿಪಿ.12 ರಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಸನ್ 1958 ರಿಂದ ಸನ್ 2011 ರವರೆಗೆ ಏನು ವ್ಯವಹಾರಗಳು ಆಗಿರುತ್ತವೆ ಎಂಬುದರ ಬಗ್ಗೆ ನಮೂದು ಇರುತ್ತದೆಂದರೆ ಸಾಕ್ಷಿಯು ಮುಂಚೆ ಗೊತ್ತಿರಲಿಲ್ಲ ಈಗ ನೋಡಿ ತಿಳಿದುಕೊಂಡಿರುತ್ತೇನೆಂದು ನುಡಿಯುತ್ತಾರೆ. ನಿಪಿ.12 ರಲ್ಲಿ ಸದರಿ ಆಸ್ತಿಯು ನಮ್ಮ ಅಜ್ಜ ಕೋನಪ್ಪನಿಂದ ನಮ್ಮ ತಂದೆಯ ಹೆಸರಿಗೆ ವಾರಸಾ ನಾತೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ನಿಡಿ.33 ರಲ್ಲಿಯೂ ಸಹ ಸದರಿ ಆಸ್ತಿಯು ನಮ್ಮ ಅಜ್ಜ ಕೋನಪ್ಪನಿಂದ ನಮ್ಮ ತಂದೆಯ ಹೆಸರಿಗೆ ವಾರಸಾ ನಾತೆಯಿಂದ ಬಂದಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ನಿಜ. ಸದರಿ ನಿಪಿ.12 ಮತ್ತು ನಿಡಿ.33 ನ್ನು ಹೊರತುಪಡಿಸಿ ಸದರಿ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆಂದು

ತೋರಿಸಲು ಬೇರೆ ದಾಖಲೆಗಳು ಇರುವುದಿಲ್ಲ. ನಾನು ಹಾಜರುಪಡಿಸಿದ ನಿಡಿ.33 ರಂತೆ ಸದರಿ ಆಸ್ತಿಯು ನಮ್ಮ ತಂದೆ ಹಾಗೂ ನಮ್ಮ 08 ಜನ ಸಹೋದರರ ಹೆಸರಿಗೆ ಜಂಟಿಯಾಗಿ ದಾಖಲು ಇರುವ ಬಗ್ಗೆ ನಮೂದು ಇರುತ್ತದೆಂದರೆ ಸಾಕ್ಷಿಯು ಅದು ಪೋಕಳ ಎಂಟ್ರಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಎಂಟ್ರಿಯು ಪೋಕಳ ಎಂಟ್ರಿ ಇರುವ ಬಗ್ಗೆ ಯಾವ ಪ್ರಾಧಿಕಾರದಿಂದಲೂ ಆದೇಶ ಪಡೆದುಕೊಂಡಿರುವುದಿಲ್ಲ ಆದರೆ ಆ ಬಗ್ಗೆ ನನ್ನ ತಂದೆ ಹೇಳುತ್ತಿದ್ದರು.

ಭಕ್ಷಿಸ ಪತ್ರದ ಪ್ರಕಾರ ನಾನು ಪೂರ್ಣ ಸಿ.ಟಿ.ಎಸ್ ನಂಬರ- 3226 ಆಸ್ತಿಗೆ ಸಂಬಂಧಿಸಿದಂತೆ ಸನ್ 2010 ರಲ್ಲಿ ನನ್ನ ಹೆಸರನ್ನು ಸೇರಿಸಿಕೊಂಡಿರುತ್ತೇನೆ. ಆ ಬಗ್ಗೆ ತಹಶೀಲ್ದಾರವರು ಆದೇಶ ಮಾಡಿರುತ್ತಾರೆ. ದಾವಾ ಆಸ್ತಿಗಳ ಪೈಕಿ ಜಮೀನನ್ನು ಹೊರತುಪಡಿಸಿ ಉಳಿದ ಎಲ್ಲಾ ಆಸ್ತಿಗಳು ನಗರಸಭೆ ವ್ಯಾಪ್ತಿಗೆ ಬರುತ್ತವೆ ಎಂದರೆ ನಿಜ. ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರ, ಗೋಕಾಕರವರಿಗೆ ತಕರಾರು ಅರ್ಜಿ ಸಲ್ಲಿಸಿದ್ದರಿಂದ ಅವರು ಆದೇಶವನ್ನು ಮಾಡಿರುತ್ತಾರೆ. ಭಕ್ಷಿಸ ಪತ್ರದ ಪ್ರಕಾರ ತಹಶೀಲ್ದಾರ, ಗೋಕಾಕರವರ ಆದೇಶದ ಮೇರೆಗೆ ನನ್ನ ಹೆಸರು ಸದರಿ ಆಸ್ತಿಗೆ ದಾಖಲಾದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ಸದರಿ ಆಸ್ತಿಗೆ ಸಂಬಂಧಿಸಿದಂತೆ ತಹಶೀಲ್ದಾರ, ಗೋಕಾಕರವರು ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಸದರಿ ಮೇಲೆ ಹೇಳಿದ ಆಸ್ತಿಗೆ ಸಂಬಂಧಿಸಿದಂತೆ ನಿಪಿ.12 ಮತ್ತು ನಿಡಿ.33 ರಲ್ಲಿ ತಹಶೀಲ್ದಾರ, ಗೋಕಾಕರವರ ಆದೇಶದಂತೆ ನನ್ನ ಹೆಸರು ದಾಖಲಾದ ಬಗ್ಗೆ ನಮೂದು ಇರುತ್ತದೆ. ಸದರಿ ತಹಶೀಲ್ದಾರ, ಗೋಕಾಕರವರು ನನ್ನ ಹೆಸರಿಗೆ ದಾಖಲು ಆಗುವಂತೆ ಮಾಡುವ ಆದೇಶದ ಸಮಯದಲ್ಲಿ ಭಕ್ಷಿಸ ಪತ್ರದ ಪ್ರಕಾರ ನನ್ನ ಹೆಸರಿಗೆ ಕೇವಲ ಅರ್ಧ ಹಿಸ್ಸೆ ಮಾತ್ರ ಇರುತ್ತದೆ ಎಂಬುದು ಗೊತ್ತಿತ್ತು ಎಂದರೆ ಸಾಕ್ಷಿಯು ಭಕ್ಷಿಸ ಪತ್ರದ ಪ್ರಕಾರ ಅರ್ಧ ಹಿಸ್ಸೆ ಹಾಗೂ ನನ್ನ ತಂದೆ ಬರೆದುಕೊಟ್ಟ ಹಕ್ಕುಪತ್ರದ ಪ್ರಕಾರ ಅರ್ಧ ಹಿಸ್ಸೆ ಎರಡನ್ನು ಪರಿಗಣಿಸಿ ಸಂಪೂರ್ಣ ಆಸ್ತಿಯನ್ನು ನನ್ನ ಹೆಸರಿಗೆ ದಾಖಲು ಮಾಡುವಂತೆ ಆದೇಶ ಮಾಡಿರುತ್ತಾರೆಂದು

ನುಡಿಯುತ್ತಾರೆ. ಸದರಿ ಹಕ್ಕುಬಿಟ್ಟ ಪತ್ರವು ಸಬ್ ರಜಿಸ್ಟ್ರರವರ ಕಚೇರಿಯಲ್ಲಿ ದಿ.07.12.2010 ರಲ್ಲಿ ನೊಂದಾಗಿರುತ್ತದೆ. ಮೇಲೆ ಹೇಳಿದಂತೆ ಸದರಿ ಸಿ ಟಿ ಎಸ್ 3226 ಕ್ಕೆ ಸಂಬಂಧಿಸಿದಂತೆ ಅರ್ಧ ಹಿಸ್ಸೆ ನೊಂದಾಯಿತ ಹಕ್ಕುಬಿಟ್ಟ ಪತ್ರದ ಪ್ರಕಾರ ಹಾಗೂ ಉಳಿದ ಅರ್ಧ ಹಿಸ್ಸೆ ಭಕ್ಷಿಸ ಪತ್ರದ ಪ್ರಕಾರ ನನ್ನ ಹೆಸರಿಗೆ ದಾಖಲು ಆಗಿದ್ದು, ಆದರೆ ನನ್ನ ತಂದೆ ಅರ್ಧ ಹಿಸ್ಸೆಗೆ ಸಂಬಂಧಿಸಿದಂತೆ ಮೃತ್ಯುಪತ್ರ ಮಾಡುವ ಪ್ರಸಂಗ ಏಕೆ ಉಂಟಾಯಿತು? ಎಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ಪ್ರಸ್ತುತ ಪ್ರಕರಣ ಚಾಲ್ತಿಯಲ್ಲಿದ್ದರಿಂದ ಸದರಿ ಆಸ್ತಿಗೆ ಸಂಬಂಧಿಸಿದಂತೆ ನನಗೆ ತೊಂದರೆಯಾಗಬಾರದೆಂದು ನನ್ನ ತಂದೆ ಮೃತ್ಯುಪತ್ರವನ್ನು ಬರೆದಿಟ್ಟಿರುತ್ತಾರೆಂದು ನುಡಿಯುತ್ತಾರೆ. ಸದರಿ ಮೃತ್ಯುಪತ್ರವನ್ನು ಮಾಡುವ ಸಮಯದಲ್ಲಿ ಅರ್ಧ ಹಿಸ್ಸೆಗೆ ಸಂಬಂಧಿಸಿದಂತೆ ನಮ್ಮ ತಂದೆಯ ಹೆಸರು ದಾಖಲು ಇರಲಿಲ್ಲ ಎಂದರೆ ನಿಜ. ಸದರಿ ಸಂಗತಿ ನಿಮ್ಮ ತಂದೆಗೆ ಹಾಗೂ ಸಾಕ್ಷಿದಾರರಿಗೆ ಮತ್ತು ದಸ್ತುಬರಹಗಾರರಿಗೆ ಮೃತ್ಯುಪತ್ರವನ್ನು ಬರೆಯುುವ ಸಮಯದಲ್ಲಿ ಗೊತ್ತಿತ್ತು ಎಂದರೆ ನನಗೆ ಮಾಹಿತಿ ಇಲ್ಲ. ಸದರಿ ಮೃತ್ಯುಪತ್ರವನ್ನು ಬರೆಸುವ ಸಮಯದಲ್ಲಿ ನಮ್ಮ ತಂದೆಯ ಹೆಸರಿಗೆ ಸದರಿ ಆಸ್ತಿಯ ಅರ್ಧ ಹಿಸ್ಸೆ ಇರಲಿಲ್ಲ ಎಂಬ ಸಂಗತಿಯನ್ನು ಸಾಕ್ಷಿದಾರರಿಗೆ ಕೇಳಿ ತಿಳಿದುಕೊಂಡಿರುತ್ತೀರಾ? ಎಂದರೆ ಸಾಕ್ಷಿಯು ಆ ಬಗ್ಗೆ ನಾನು ಅವರನ್ನು ವಿಚಾರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ದಿ.30.05.2011 ರಂದು ಸದರಿ ಆಸ್ತಿಯು ನನ್ನ ಹೆಸರಿಗೆ ಭಕ್ಷಿಸ ಪತ್ರದ ಪ್ರಕಾರ ದಾಖಲಾಗುವ ಸಮಯದಲ್ಲಿ ಅರ್ಧ ಹಿಸ್ಸೆ ಭಕ್ಷಿಸ ಪತ್ರದ ಪ್ರಕಾರ ಹಾಗೂ ಅರ್ಧ ಹಿಸ್ಸೆ ನೊಂದಾಯಿತ ಹಕ್ಕುಬಿಟ್ಟ ಪತ್ರದ ಪ್ರಕಾರ ದಾಖಲಾದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನಿಜ. ಭಕ್ಷಿಸ ಪತ್ರದ ಪ್ರಕಾರ ಅರ್ಧ ಹಿಸ್ಸೆ ಮಾತ್ರ ದಾಖಲಾಗಬೇಕಾಗಿತ್ತು ಆದರೆ ಪೂರ್ಣ ನನ್ನ ಹೆಸರಿಗೆ ದಾಖಲಾಗಿದ್ದು, ತಪ್ಪಾಗಿರುತ್ತದೆಂದು ನಾನು ಇವತ್ತಿನವರೆಗೆ ನಗರಸಭೆಯವರಿಗೆ ಅದನ್ನು ಸರಿಪಡಿಸಲು ಅರ್ಜಿ ಸಲ್ಲಿಸಿರುವುದಿಲ್ಲ ಏಕೆಂದರೆ ಪೂರ್ಣ ಆಸ್ತಿಯು ನನ್ನ ಹೆಸರಿಗೆ

ಆಗಿದ್ದು, ನನ್ನ ಕಬ್ಜೆಯಲ್ಲಿ ಇರುತ್ತದೆಂದು ನುಡಿಯುತ್ತಾರೆ. ಮೃತ್ಯುಪತ್ರದಲ್ಲಿ ಸದರಿ ಆಸ್ತಿಯ ಉಳಿದ ಅರ್ಧ ಆಸ್ತಿಯು ನನ್ನ ಗಂಡಸು ಮಕ್ಕಳ ಹೆಸರಿಗೆ ಪೋಕಳ ಎಂಟ್ರಿ ದಾಖಲು ಇರುವ ಬಗ್ಗೆ ಒಕ್ಕಣೆ ಇರುತ್ತದೆಂದರೆ ನಿಜ. ಭಕ್ಷಿಸ ಪತ್ರ ಹಾಗೂ ಹಕ್ಕುಬಿಟ್ಟ ಪತ್ರದ ಪ್ರಕಾರ ಪೋಕಳ ಎಂಟ್ರಿ ಕಡಿಮೆಯಾಗಿ ನನ್ನ ಹೆಸರು ಸಂಪೂರ್ಣ ದಾಖಲು ಆಗಿರುತ್ತದೆ. ಮೃತ್ಯುಪತ್ರ ಮಾಡುವ ಸಮಯದಲ್ಲಿ ಸದರಿ ಆಸ್ತಿಯು ನನ್ನ ಹೆಸರಿಗೆ ಸಂಪೂರ್ಣವಾಗಿ ದಾಖಲು ಆಗಿತ್ತು. ಸಾಕ್ಷಿ ಮುಂದುವರೆದು ಸದರಿ ಆಸ್ತಿಯ ಅರ್ಧ ಹಿಸ್ಸೆಗೆ ಸಂಬಂಧಿಸಿದಂತೆ ನನ್ನ ತಂದೆ ಮೃತ್ಯುಪತ್ರ ಮಾಡಿಟ್ಟಿರುವ ಸಂಗತಿ ನನಗೆ ಇತ್ತೀಚೆಗೆ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. ಸದರಿ ಮೃತ್ಯುಪತ್ರದ ಪ್ರಕಾರ ನನ್ನ ಹೆಸರಿಗೆ ಸದರಿ ಆಸ್ತಿಯ ಅರ್ಧ ಹಿಸ್ಸೆ ಬಂದಿರುತ್ತದೆಂದು ಪ್ರಸ್ತುತ ಪ್ರಕರಣವನ್ನು ಹೊರತುಪಡಿಸಿ ಯಾವುದೇ ಘೋಷಣಾತ್ಮಕ ದಾವೆಯನ್ನು ಹೂಡಿರುವುದಿಲ್ಲ.

ನಿಡಿ.172 ಎಂದು ಗುರುತಿಸಿಕೊಂಡಿರುವ ವಿವಾದಿತ ಮೃತ್ಯುಪತ್ರವು ಒಟ್ಟು 05 ಪುಟಗಳು ಇದ್ದು ಆ ಪೈಕಿ 1 ಮತ್ತು 2 ನೇ ಪುಟಗಳು ದಸ್ತಾಬೇಜು ಹಾಳೆಯ ಮೇಲೆ ಬರೆಯಲಾಗಿದ್ದು, 3 ರಿಂದ 5 ನೇ ಪುಟಗಳು ಬಿಳಿ ಹಾಳೆಯ ಮೇಲೆ ಬರೆಯಲಾಗಿರುತ್ತದೆಂದರೆ ನಿಜ. ಮೊದಲ ಪುಟದಲ್ಲಿ ನಮ್ಮ ತಂದೆಯ ಹೆಸರಿಗೆ ದಸ್ತಾವೇಜು ಹಾಳೆಯನ್ನು ಖರೀದಿಸಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ನಿಜ. ಅದೇ ರೀತಿ ದಸ್ತಾವೇಜು ಹಾಳೆ ಖರೀದಿಸಿದ ಬಗ್ಗೆ ಸಹ ದಿನಾಂಕ ನಮೂದು ಇರುವುದಿಲ್ಲ ಎಂದರೆ ನಿಜ. ಸದರಿ ಮೃತ್ಯುಪತ್ರದಲ್ಲಿ ನಮ್ಮ ತಂದೆಗೆ ಒಟ್ಟು 10 ಜನ ಮಕ್ಕಳು ಇರುವ ಬಗ್ಗೆ ನಮೂದು ಇರುತ್ತದೆಂದರೆ ನಿಜ. ಸದರಿ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಇರುತ್ತದೆಂದು ತೋರಿಸಲು ಮೃತ್ಯುಪತ್ರ ಮಾಡುವ ಕಾಲಕ್ಕೆ ನಮ್ಮ ತಂದೆ ಏನು ದಾಖಲೆಗಳನ್ನು ತೆಗೆದುಕೊಂಡು ಬಂದಿದ್ದ ಎಂದು ನಾನು ಸಾಕ್ಷಿದಾರರನ್ನು ವಿಚಾರಿಸಿರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ